ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಸಂಸತ್ತು

ಪತ್ರಿಕೆಯ ಹೆಸರು : NAME OF THE NEWS PAPER : ಉದಯವಾಣಿ    ದಿನಾಂಕ : DATE : 02/08/2019

# ಮಕ್ಕಳಿಗೆ ಲೈಂಗಿಕ ಕಿರುಕುಳಕ್ಕೆ ಗಲ್ಲು

ಉ.ವಾ. 2/8/19

## ಪಾರ್ಲಿಮೆಂಟ್‌ನಲ್ಲಿ ಮಸೂದೆಗೆ ಅಂಗೀಕಾರ

**ನವದೆಹಲಿ:** ಇನ್ನು ಮುಂದೆ ಮಕ್ಕಳ ಮೇಲೆ ಅತ್ಯಾಚಾರ, ಲೈಂಗಿಕ ಕಿರುಕುಳ ನೀಡಿದರೆ ಗಲ್ಲು ಶಿಕ್ಷೆ ಖಚಿತ. ಇದರ ಜತೆಗೆ ಮಕ್ಕಳು ಇರುವ ಲೈಂಗಿಕ ವಿಡಿಯೋ, ಚಿತ್ರಗಳನ್ನು ಹೊಂದಿರುವುದೂ ಶಿಕ್ಷಾರ್ಹ ಅಪರಾಧ...

ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (ತಿದ್ದುಪಡಿ) ವಿಧೇಯಕಕ್ಕೆ ಲೋಕಸಭೆಯಲ್ಲಿ ಗುರುವಾರ ಅನುಮೋದನೆ ಸಿಕ್ಕಿದೆ. ಜು.29ರಂದು ರಾಜ್ಯಸಭೆಯಲ್ಲಿ ಅನುಮೋದನೆಗೊಂಡಿರುವುದರಿಂದ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರ ಅಂಕಿತ ಬಿದ್ದೊಡನೆ, ಇದು ಕಾನೂನಾಗಿ ಜಾರಿಯಾಗಲಿದೆ.

ವಿಧೇಯಕ ಮೇಲೆ ನಡೆದ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಸ್ಮೃತಿ ಇರಾನಿ, ಪೋಕ್ಸೋ ಮಾಹಿತಿ ಕೋಶದಲ್ಲಿ 6.2 ಲಕ್ಷ ಪ್ರಕರಣಗಳ ಮಾಹಿತಿ ಸಂಗ್ರಹಿಸಲಾಗಿದೆ. 2018ರಿಂದ ಈ ಮಾಹಿತಿ ಕೋಶ ಕಾರ್ಯಾಚರಿಸುತ್ತಿದೆ. ಅಪರಾಧ ಎಸಗಿದ ವ್ಯಕ್ತಿಯನ್ನೇ ಶಿಕ್ಷಿಸುವ ಬಗ್ಗೆ ಎಚ್ಚರಿಕೆಯ ಕ್ರಮ ಕೈಗೊಳ್ಳಲಾಗಿದೆ. ಇದರ ಜತೆಗೆ ಲಿಂಗ ತಾರತಮ್ಯ ನಿವಾರಣೆ ನಿಟ್ಟಿನಲ್ಲಿ ಮಹತ್ವದ ಕ್ರಮ ಕೈಗೊಳ್ಳಲಾಗಿದೆ. ಹೊಸ ವಿಧೇಯಕದಿಂದ 43 ಕೋಟಿ ಮಕ್ಕಳಿಗೆ ರಕ್ಷೆ ಸಿಗಲಿದೆ ಎಂದಿದ್ದಾರೆ. ಚರ್ಚೆಯಲ್ಲಿ ಭಾಗವಹಿಸಿದ ಎಲ್ಲಾ ಸಂಸದರು ವಿಧೇಯಕದಲ್ಲಿನ ತಿದ್ದುಪಡಿ ಪ್ರಸ್ತಾಪಕ್ಕೆ ಹೆಚ್ಚಿನ ವಿರೋಧ ಸೂಚಿಸಲಿಲ್ಲ ಎನ್ನುವುದು ಗಮನಾರ್ಹ ಸಂಗತಿ.

**ಆರೋಪಿಗೆ 18 ವರ್ಷವಾದರೆ ಮಾತ್ರ ಗಲ್ಲು:** ಅತ್ಯಾಚಾರದಂಥ ಘಟನೆಗಳಲ್ಲಿ ಬಾಲಾಪರಾಧಿ ಭಾಗಿಯಾದರೆ ಅಂಥ ಪ್ರಕರಣಗಳು ಬಾಲಪರಾಧ ನ್ಯಾಯ ಮಂಡಳಿ ವ್ಯಾಪ್ತಿಯಲ್ಲಿ ಬರುತ್ತವೆ. ಇಂಥ ಪ್ರಕರಣಗಳಲ್ಲಿ ಕೃತ್ಯವೆಸಗಿದಾತ 18 ವರ್ಷ ವಯೋಮಿತಿಯವನಾಗಿದ್ದರೆ ಮಾತ್ರ ಗಲ್ಲು ಶಿಕ್ಷೆ ನೀಡಲಾಗುತ್ತದೆ ಎಂದರು ಇರಾನಿ. ನಿರ್ಭಯಾ ನಿಧಿ ನೆರವಿನೊಂದಿಗೆ ದೇಶಾದ್ಯಂತ 1,023 ತ್ವರಿತಗತಿಯ ಕೋರ್ಟ್‌ಗಳನ್ನು ಸ್ಥಾಪಿಸಲಾಗುತ್ತದೆ ಎಂದರು.

- ಅಪರಾಧ ಎಸಗಿದ ವ್ಯಕ್ತಿಗೇ ಶಿಕ್ಷೆ ನೀಡುವಂತೆ ಜಾಗರೂಕತೆಯ ಕ್ರಮ
- ದೇಶಾದ್ಯಂತ ನಿರ್ಭಯ ನಿಧಿಯನ್ವಯ 1,023 ತ್ವರಿತ ಕೋರ್ಟ್‌ಗಳ ಸ್ಥಾಪನೆ
- ಲಿಂಗ ತಾರತಮ್ಯ ನಿವಾರಣೆ ನಿಟ್ಟಿನಲ್ಲಿ ಮಹತ್ವದ ಕ್ರಮ
- ಹೊಸ ವಿಧೇಯಕದಿಂದ 43 ಕೋಟಿ ಮಕ್ಕಳಿಗೆ ಅನುಕೂಲ
- 2018ರಿಂದ ಶುರುವಾಗಿರುವ ಪೋಕ್ಸೋ ಮಾಹಿತಿ ಕೋಶದಲ್ಲಿ 6.2 ಲಕ್ಷ ಪ್ರಕರಣ

### ಸಾರ್ವಜನಿಕವಾಗಿ ಗಲ್ಲಿಗೇರಿಸಿ

ಮಕ್ಕಳಿಗೆ ಲೈಂಗಿಕ ಕಿರುಕುಳ ನೀಡಿದವರಿಗೆ ಕಠಿಣಾತಿಕಠಿಣ ಶಿಕ್ಷೆ ನೀಡಬೇಕು ಎಂಬ ಬಗ್ಗೆ ಒಕ್ಕೊರಲ ಆಗ್ರಹ ವ್ಯಕ್ತವಾಯಿತು. ಆರ್‌ಎಲ್‌ಪಿ ಸಂಸದ ಹನುಮಾನ್ ಬೇನಿವಾಲ್, ಇಂಥ ಪ್ರಕರಣದಲ್ಲಿ ಭಾಗಿಯಾದವರನ್ನು ಸಾರ್ವಜನಿಕವಾಗಿ ಗಲ್ಲಿಗೇರಿಸಬೇಕು ಎಂದು ಒತ್ತಾಯಿಸಿದರು. ಬಿಜೆಪಿಯ ಕಿರಣ್ ಖೇರ್ ಮಾತನಾಡಿ, ಅಂಥವರನ್ನು ನೇಣುಗಂಬಕ್ಕೆ ಏರಿಸದೆ, ರಾಸಾಯನಿಕ ಚುಚ್ಚುಮದ್ದು ನೀಡಿ ಸಾಯಿಸಬೇಕು. ಅವರಿಗೆ ಕೂಡ ನೋವು ಎಂದರೆ ಏನು ಎಂಬುದು ಅರ್ಥವಾಗಲಿ ಎಂದರು.

**ಗಲ್ಲು ಕೂಡ ಸಾಲದು:** ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಮಂಡ್ಯ ಸಂಸದೆ ಸುಮಲತಾ ಅಂಬರೀಷ್, ಮಕ್ಕಳ ಮೇಲೆ ಲೈಂಗಿಕ ಕಿರುಕುಳ ಎಸಗುವವರಿಗೆ ಗಲ್ಲು ಶಿಕ್ಷೆಯೂ ಕಮ್ಮಿ ಎಂದಿದ್ದಾರೆ.